
ಕೇಂದ್ರವನ್ನಾಗಿಸುವ, ದಸರಾ ಮಾತ್ರವಲ್ಲದೇ ವರ್ಷವಿಡೀ ಪ್ರವಾಸಿಗರನ್ನು ಆಕರ್ಷಿಸುವ ವಿಚಾರ ಪ್ರಗತಿ ಕಂಡಿಲ್ಲ. ಪಕ್ಕದ ಕೇರಳದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಯಾಗುತ್ತಿರುವ, ಅತ್ಯಾಕರ್ಷಕವಾಗುತ್ತಿರುವ ವಿಚಾರದಿಂದಲೂ ಪಾಠ ಕಲಿತಂತಿಲ್ಲ.

ಅರಮನೆ, ಮೃಗಾಲಯ, ಚಾಮುಂಡಿಬೆಟ್ಟ ಹೊರತಾಗಿ ಇನ್ನುಳಿದ ಪ್ರವಾಸಿ ತಾಣಗಳನ್ನು ಆಕರ್ಷಣೀಯ ಕೇಂದ್ರವನ್ನಾಗಿ ಮಾಡದಿರುವುದು, ಹೊಸ ತಾಣಗಳು ರೂಪುಗೊಳ್ಳದಿರುವುದು ಮೈಸೂರಿನ ಪ್ರವಾಸೋದ್ಯಮಕ್ಕೆ ಉಂಟಾಗಿರುವ ಹಿನ್ನಡೆ. ಮೈಸೂರು ನಗರದೊಳಗೆ ಹಾಗೂ ಸುತ್ತಮುತ್ತ ಸಾಕಷ್ಟು ಆಕರ್ಷಣೀಯ ಪ್ರವಾಸಿ ಕೇಂದ್ರಗಳಿವೆ. ಕಾರಂಜಿ ಕೆರೆ, ಕುಕ್ಕರಹಳ್ಳಿ ಕೆರೆ, ಸೇಂಟ್ ಫಿಲೋಮಿನಾ ಚರ್ಚ್, ರೈಲ್ವೆ ವಸ್ತು ಸಂಗ್ರಹಾಲಯ, ಇಂದಿರಾ ಗಾಂಧಿ ರಾಷ್ಟ್ರೀಯ ಸಂಗ್ರಹಾಲಯ, ಮಾನಸ ಗಂಗೋತ್ರಿ ಆವರಣದಲ್ಲಿರುವ ಜಾನಪದ ವಸ್ತು ಸಂಗ್ರಹಾಲಯ, ಜಗನ್ಮೋಹನ ಅರಮನೆ, ಲಲಿತಮಹಲ್ ಹೋಟೆಲ್, ತಲಕಾಡು, ಸೋಮನಾಥಪುರ, ತಿ.ನರಸೀಪುರದ ತ್ರಿವೇಣಿ ಸಂಗಮ, ನಂಜನಗೂಡು, ಚುಂಚಕನಕಟ್ಟೆ, ಬಂಡೀಪುರ, ನಾಗರಹೊಳೆ ರಾಷ್ಟ್ರೀಯ ಉದ್ಯಾನ, ಕೆಆರ್‌ಎಸ್–ಬೃಂದಾವನ, ರಂಗಪಟ್ಟಣ–ಟಿಪ್ಪು ಅರಮನೆ, ನಿಮಿಷಾಂಭಾ ದೇಗುಲ, ಬಲಮುರಿ, ಪಶ್ಚಿಮ ವಾಹಿನಿ, ರಂಗನತಿಟ್ಟು ಪಕ್ಷಿಧಾಮ, ಮಲೆ ಮಹದೇಶ್ವರ ಬೆಟ್ಟ, ಹೊಗೇನಕಲ್ ಜಲಪಾತ, ಹಿಮವದ್ ಗೋಪಾಲಸ್ವಾಮಿ ಬೆಟ್ಟ, ಗಗನಚುಕ್ಕಿ, ಭರಚುಕ್ಕಿ ಜಲಾಶಯ... ಹೀಗೆ ಹತ್ತಾರು



## ಮೈಸೂರಿನತ್ತ ಹೆಚ್ಚಿದ ವಲಸೆ



ಬೆಂಗಳೂರು ರಾಜಕೀಯ ರಾಜಧಾನಿಯಾದರೆ ಮೈಸೂರನ್ನು ಸಾಂಸ್ಕೃತಿ ರಾಜಧಾನಿ ಎನ್ನುತ್ತೇವೆ. ಬಹಳಷ್ಟು ವರ್ಷಗಳಿಂದ ಮೈಸೂರಿನತ್ತ ವಲಸೆ ಹೆಚ್ಚಿದೆ. ಹಿಂದಿನಿಂದಲೂ ಶಿಕ್ಷಣ, ಚಿತ್ರಕಲೆ, ಸಂಗೀತ, ಯೋಗ ಕಲಿಯಲು ಬೇರೆ ಬೇರೆ ಕಡೆಯಿಂದ ಜನರು ಇಲ್ಲಿಗೆ ಬರುತ್ತಿದ್ದರು. ನಾನೂ ಉದ್ಯೋಗದ ಮೇಲೆ ದಕ್ಷಿಣ ಕನ್ನಡದ ಸುಳ್ಯದಿಂದ ಮೈಸೂರಿಗೆ ಬಂದೆ. ಈಗ ಚಟುವಟಿಕೆಗಳೂ ವಿಸ್ತಾರವಾಗಿವೆ. ಯೋಗವೇ ವಾಣಿಜ್ಯೀಕರಣಗೊಂಡಿದ್ದು, ಉದ್ಯಮವಾಗಿ ಬಿಟ್ಟಿದೆ. ಯೋಗ ಕಲಿಸುವ ಕೇಂದ್ರಗಳು ದಾರಿಗೊಂದರಂತೆ ತಲೆ ಎತ್ತುತ್ತಿವೆ. ಹೆಚ್ಚಿನ ಸಂಖ್ಯೆಯಲ್ಲಿ ವಿದೇಶಿಗರು ಬಂದು ಮನೆ ಮಾಡಿ ಯೋಗ ಕಲಿಯುತ್ತಿದ್ದಾರೆ. ಯುಗ ಪರಿವರ್ತನೆಯಾಗಿದೆ ಅಷ್ಟೆ. ನಾನು ಬಂದಾಗ ಒಂದು ಎಂಜಿನಿಯರ್ ಕಾಲೇಜಿತ್ತು. ಈಗ ಆ ಸಂಖ್ಯೆ ಹತ್ತು ದಾಟಿದೆ. ಮೈಸೂರು ವಿಶ್ವವಿದ್ಯಾಲಯ ಮಾತ್ರ ಇತ್ತು. ಈಗ ಐದು ವಿಶ್ವವಿದ್ಯಾಲಯಗಳಿವೆ.

**–ಪ್ರೊ. ಕೆ. ಚಿದಾನಂದಗೌಡ**, ವಿಶ್ರಾಂತ ಕುಲಪತಿ




ಮೈಸೂರಿನಲ್ಲಿ ಇತ್ತೀಚೆಗೆ ನಡೆಯುತ್ತಿರುವ ಅಪರಾಧ ಕೃತ್ಯಗಳನ್ನು ನೋಡಿ ಮಹಿಷಾಸುರನ ಎದೆಯೂ ನಡುಗಿದಂತಿದೆ